ಪ್ರೌಢ ಶಾಲೆಗಳಲ್ಲಿ 32 ಆಂಗ್ಲ ಹುದ್ದೆಗಳು, 3 ತಮಿಳು ಹಾಗೂ 2 ಉರ್ದು ಹುದ್ದೆಗಳ ಅವಶ್ಯಕತೆ ಇರುತ್ತದೆ.

ಊ) ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಣ ಅಭಿವೃದ್ಧಿಗಾಗಿ ಉಚಿತ ಸೈಕಲ್, ನೋಟ್ ಪುಸ್ತಕ, ಬ್ಯಾಗ್, ಸಮವಸ್ತ್ರ ಕಾರ್ಯಕ್ರಮಗಳಡಿಯ ಫಲಾನುಭವಿಗಳ ವಿವರಗಳು ಈ ಕೆಳಕಂಡಂತಿದೆ.;

ಕ್ರ ಸಂ	ಕಾರ್ಯಕ್ರಮದ ವಿವರ	2007–08	2008–09	2009–10
1	ಸೈಕಲ್	4421	6158	5457
2	ನೋಟ್ ಪುಸ್ತಕ, ಬ್ಯಾಗ್,	23324	50194	47773
3	ಸಮವಸ್ತ್ರ	1,82,333	1,97,732	1,94,063

ಋ) ಬಂದಿದೆ.

ವಯಸ್ಕರ ಶಿಕ್ಷಣ ಕಾರ್ಯಕ್ರಮಗಳ ಬಗ್ಗೆ

764 (328) ಶ್ರೀ ಕುಮಾರಸ್ವಾಮಿ ಕೆ.ಜಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಯಾವ ಯಾವ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಯೊಂದು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಫಲಾನುಭವಿ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಸ್ಥಳ, ಸಂಖ್ಯೆ, ಗ್ರಾಮ, ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಶಿಕ್ಷಕರಿದ್ದಾರೆ, ಅವರಿಗೆ ನೀಡುತ್ತಿರುವ ಸಂಬಳ–ಸಾರಿಗೆ ಎಷ್ಟು (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು);

ಈ) ಶಿಕ್ಷಕರ ಹೆಸರು, ವಿಳಾಸ ಮತ್ತು ಅವರ ಕೇಂದ್ರ ಸ್ಥಾನದ ಪೂರ್ಣ ವಿವರ ನೀಡುವುದು;

ಉ) ವಯಸ್ಕರ ಶಿಕ್ಷಣ ಇಲಾಖೆ ಈ ಎಲ್ಲಾ ಕಾರ್ಯಕ್ರಮಗಳನ್ನು ಯಾವ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ (ವಿಧಾನಸಭಾ ಕ್ಷೇತ್ರವಾರು ಸಂಸ್ಥೆಗಳ ಹೆಸರು, ವಿಳಾಸ ವಿವರ ನೀಡುವುದು);

ಶ್ರೀ ಶಿವನಗೌಡ ನಾಯಕ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಸಚಿವರು) :

ಅ) ವಯಸ್ಕರ ಶಿಕ್ಷಣ ಇಲಾಖೆಯಲ್ಲಿ ಈ ಕೆಳಕಂಡ ಸಾಕ್ಷರತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ವಿದ್ಯಾರ್ಥಿಗಳ ಮೂಲಕ ಸಾಕ್ಷರತಾ ಕಾರ್ಯಕ್ರಮ
2. ವಿಶೇಷ ಘಟಕ ಯೋಜನೆಯಡಿ ಶಿಬಿರ ಸಾಕ್ಷರತಾ ಕಾರ್ಯಕ್ರಮ
3. ಗಿರಿಜನ ಉಪಯೋಜನೆಯಡಿ ಶಿಬಿರ ಸಾಕ್ಷರತಾ ಕಾರ್ಯಕ್ರಮ
4. ಸಮುದಾಯ ಶಿಕ್ಷಣ ಕೇಂದ್ರ ವೃತ್ತಿಕೌಶಲ ತರಬೇತಿ ಕೇಂದ್ರ
5. ವಿಶೇಷ ಘಟಕ ಯೋಜನೆಯಡಿ ವೃತ್ತಿ ಕೌಶಲ ತರಬೇತಿ
6. ಗಿರಿಜನ ಉಪಯೋಜನೆ ವೃತ್ತಿಕೌಶಲ ತರಬೇತಿ
7. ಮುಂದುವರಿಕೆ ಶಿಕ್ಷಣ ಕಾರ್ಯಕ್ರಮ
8. ಬಾಕಿ ಉಳಿದ ಅನಕ್ಷರಸ್ಥರಿಗೆ ಸಾಕ್ಷರತಾ ಕಾರ್ಯಕ್ರಮ (ಪಿ.ಆರ್.ಐ)

ಆ) ಶಿವಮೊಗ್ಗ ಜಿಲ್ಲೆಯಲ್ಲಿ ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಒಟ್ಟು ಫಲಾನುಭವಿಗಳ ಸಂಖ್ಯೆ: 11040 ಇರುತ್ತದೆ. ವಿಧಾನಸಭಾ ಕ್ಷೇತ್ರವಾರು ವಿವರದ ಪಟ್ಟಿ ಅನುಬಂಧ–ಅ ರಲ್ಲಿ ಲಗತ್ತಿಸಿದೆ.

ಇ) ಮಾತೃ ಇಲಾಖೆಯಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ವೇತನ ಪಡೆದು ನಿಯೋಜನೆ ಮೇಲೆ ಲೋಕ ಶಿಕ್ಷಣ ಇಲಾಖೆ ಕಾರ್ಯಕ್ರಮ ಗಳಿಗಾಗಿ ತಾಲ್ಲೂಕು ಸಂಯೋಜಕರಾಗಿ 05 ಜನ ಶಿಕ್ಷಕರು ಪ್ರಸ್ತುತ ಕಾರ್ಯನಿರ್ವಹಿಸುತ್ತಿದ್ದಾರೆ. ವಿಧಾನಸಭಾ ಕ್ಷೇತ್ರವಾರು ವಿವರ ಪಟ್ಟಿ ಅನುಬಂಧ–ಆ ರಲ್ಲಿ ಲಗತ್ತಿಸಿದೆ.

ಇ) ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ 05 ಜನ ಶಿಕ್ಷಕರ ವಿಳಾಸದ ಪಟ್ಟಿ ಅನುಬಂಧ–ಇ ರಲ್ಲಿ ಲಗತ್ತಿಸಿದೆ.

ಉ)

1. ಶಿವಮೊಗ್ಗ ಜಿಲ್ಲೆಯಲ್ಲಿ ಎಲ್.ಟಿ.ಎಸ್. ಕಾರ್ಯಕ್ರಮ ಸಂಬಂಧಪಟ್ಟ ಪ್ರೌಢಶಾಲಾ ಸಂಪನ್ಮೂಲ ಶಿಕ್ಷಕರು ಹಾಗೂ 8 ಮತ್ತು 9ನೇ ತರಗತಿಯ ಪ್ರೌಢಶಾಲಾ ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
2. ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಯ್ದ ನವ ಸಾಕ್ಷರರಿಗೆ ವೃತ್ತಿ ಕೌಶಲ ತರಬೇತಿ ಕಾರ್ಯಕ್ರಮ ಜನ ಶಿಕ್ಷಣ ಸಂಸ್ಥಾನ ಶಿವಮೊಗ್ಗ ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ.

ಅನುಬಂಧ – ಅ

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿಯೊಂದು ಸಾಕ್ಷರತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಫಲಾನುಭವಿ ಕಲಿಕಾರ್ಥಿಗಳ ವಿವರ

(ಸ್ಥಳ ಸಂಖ್ಯೆ, ಗ್ರಾಮ, ವಿಧಾನ ಸಭಾ ಕ್ಷೇತ್ರವಾರು, ವಿವರ)

1) ಶಿವಮೊಗ್ಗ ವಿಧಾನ ಸಭಾ ಕ್ಷೇತ್ರ	1. 50 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆ ಅಡಿ 2. 562 ಜನ ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 3. 30 ಜನ ನವಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮ ಮಿಳಘಟ್ಟ ಶಿವಮೊಗ್ಗ ನಗರ
2) ಶಿವಮೊಗ್ಗ ಗ್ರಾಮಾಂತರ ವಿಧಾನ ಸಭಾ ಕ್ಷೇತ್ರ	1. 50 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆ ಅಡಿ ಕುಂಚೇನಹಳ್ಳಿ ತಾಂಡ 2. 50 ಜನ ಕಲಿಕಾರ್ಥಿಗಳು ಟಿ.ಎಸ್.ಪಿ ಯೋಜನೆಯ ಹಕ್ಕಿ ಪಿಕ್ಕಿ ಕ್ಯಾಂಪ್ ಶಿವಮೊಗ್ಗ ತಾಲ್ಲೂಕು

	3. 1203 ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 4. 30 ಜನ ನವ ಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮ ಹೊಳಲೂರು ಶಿವಮೊಗ್ಗ ತಾಲ್ಲೂಕು
3) ಭದ್ರಾವತಿ ವಿಧಾನಸಭಾ ಕ್ಷೇತ್ರ	1. 50 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆ ಅಡಿ ಹೆಬ್ಬಂಡಿ ಲಂಬಾಣಿ ತಾಂಡ 2. 50 ಜನ ಕಲಿಕಾರ್ಥಿಗಳು ಟಿ.ಎಸ್.ಪಿ ಯೋಜನೆಯ ದೊಡ್ಡೇರಿ ಭದ್ರಾವತಿ ತಾಲ್ಲೂಕು 3. 1500 ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 4. 60 ಜನ ನವ ಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ ಕಾರ್ಯಕ್ರಮ ಎಸ್.ಸಿ.ಪಿ ಯೋಜನೆ. ಭಗವತಿ ಕೆರೆ ಅರಬಿಳಿಚಿ ಕ್ಯಾಂಪ್ 5. 30 ಜನ ನವಸಾಕ್ಷರರು ವೃತ್ತಿ ಕೌಶಲ್ಯ ಟಿ.ಎಸ್.ಪಿ ಯೋಜನೆ ಯಡಿ ಡಿ.ಬಿ. ಹಳ್ಳಿ ಭದ್ರಾವತಿ ತಾಲ್ಲೂಕು
4) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ	1. 50 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆ ಅಡಿ ಮೇಲಿನ ತುದೂರು 2. 445 ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 3. 30 ಜನ ನವಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ (ಎಸ್.ಸಿ.ಪಿ ಯೋಜನೆಯಡಿ) ಸುತ್ತಾ ಶಿಳ್ಳೆ

	ಕ್ಯಾತರ ಕಾಲೋನಿ, ಹೊಸನಗರ ತಾಲ್ಲೂಕು
5) ಸಾಗರ ತಾಲ್ಲೂಕ್	1. 100 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆಯಡಿ ಕಾರೇಹೊಂಡ ಮತ್ತು ಹಂದಿಗೋಡು, ಸಾಗರ ತಾಲ್ಲೂಕು 2. 1390 ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 3. 30 ಜನ ನವ ಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ (ಎಸ್.ಸಿ.ಪಿ) ಹೆಬ್ಬರಿಗೆ, ಹೆಗ್ಗೋಡು
6) ಸೊರಬ ತಾಲ್ಲೂಕು	1. 100 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆಯಡಿ ಗುಡ್ಡೇಕೊಪ್ಪ, ಸುತ್ತಕೋಟೆ ಸೊರಬ ತಾಲ್ಲೂಕು 2. 2000 ಜನ ಕಲಿಕಾರ್ಥಿಗಳು ಎಲ್.ಟಿ.ಎಸ್. ಕಾರ್ಯಕ್ರಮ 3. 60 ಜನ ನವಸಾಕ್ಷರರು ವೃತ್ತಿ ಕೌಶಲ್ಯ ತರಬೇತಿ (ಎಸ್.ಸಿ.ಪಿ) ತಲ್ಲೂರು, ಹೊಸಬಾಳೆ, ಸೊರಬ ತಾಲ್ಲೂಕು
7) ಶಿಕಾರಿಪುರ ತಾಲ್ಲೂಕು	1. 100 ಜನ ಕಲಿಕಾರ್ಥಿಗಳು ಎಸ್.ಸಿ.ಪಿ ಯೋಜನೆಯಡಿ ನಳ್ಳಿನ ಕೊಪ್ಪ, ಬಳೂರು, ಶಿಕಾರಿಪುರ ತಾಲ್ಲೂಕು 2. 50 ಜನ ಕಲಿಕಾರ್ಥಿಗಳು ಟಿ.ಎಸ್.ಪಿ ಯೋಜನೆಯಡಿ ನೆಲವಾಗಿಲು, ಶಿಕಾರಿಪುರ ತಾಲ್ಲೂಕು

	3. 2900 ಕಲಿಕಾರ್ಥಿಗಳು ಎಲ್. ಟಿ.ಎಸ್. ಕಾರ್ಯಕ್ರಮ 4. 60 ನವ ಸಾಕ್ಷಕರು ವೃತ್ತಿ ಕೌಶಲ್ಯ ಎಸ್.ಸಿ.ಪಿ ಯೋಜನೆಯಡಿ ಹಿತ್ಲ, ಗಾಮ, ಶಿಕಾರಿಪುರ ತಾಲ್ಲೂಕು 5. 60 ನವ ಸಾಕ್ಷರರು ಟಿ.ಎಸ್.ಪಿ ಯೋಜನೆಯಡಿ ಕಲ್ಮನೆ, ಬಗನಕಟ್ಟೆ, ಶಿಕಾರಿಪುರ ತಾ:

ಅನುಬಂಧ – ಆ

ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಜನ ಶಿಕ್ಷಕರು ಇದ್ದಾರೆ ಅವರಿಗೆ ನೀಡುತ್ತಿರುವ ಸಂಬಳ ಸಾರಿಗೆ ವಿವರ

(ವಿಧಾನ ಸಭಾ ಕ್ಷೇತ್ರವಾರು ವಿವರ)

ಶಿವಮೊಗ್ಗ ಜಿಲ್ಲೆಯಲ್ಲಿ ಹಾಲಿ 05 ಜನ ಶಿಕ್ಷಕರು ನಿಯೋಜನೆ ಮೇಲೆ ಮಾತೃ ಇಲಾಖೆಯಾದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ವೇತನ ಪಡೆದು ಸಾಕ್ಷರತಾ ಕಾರ್ಯಕ್ರಮದಲ್ಲಿ ತಾಲ್ಲೂಕು ಸಂಯೋಜಕರಾಗಿ ಈ ಕೆಳಕಂಡ ವಿಧಾನಸಭಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು. ಇವರಿಗೆ ವಯಸ್ಕರ ಶಿಕ್ಷಣ ಇಲಾಖೆಯಿಂದ ಮಾಸಿಕ ತಲಾ ರೂ. 625=00 ರಂತೆ ನಿಗಧಿತ ಪ್ರಮಾಣ ಭತ್ಯೆ ಮಾತ್ರ ನೀಡಲಾಗುತ್ತಿದೆ.

1. ಭದ್ರಾವತಿ ವಿಧಾನ ಸಭಾ ಕ್ಷೇತ್ರ –1
2. ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ –1
3. ಸಾಗರ ವಿಧಾನ ಸಭಾ ಕ್ಷೇತ್ರ –1
4. ಸೊರಬ ವಿಧಾನ ಸಭಾ ಕ್ಷೇತ್ರ –1
5. ಶಿಕಾರಿಪುರ ವಿಧಾನ ಸಭಾ ಕ್ಷೇತ್ರ –1

ಅನುಬಂಧ – ಇ

ಶಿಕ್ಷಕರ ಹೆಸರು ಮತ್ತು ವಿಳಾಸ ಮತ್ತು ಅವರ ಕೇಂದ್ರಸ್ಥಾನ ಪೂರ್ಣ ವಿವರ

ಕ್ರ. ಸಂ.	ಶಿಕ್ಷಕರ ಹೆಸರು ಮತ್ತು ವಿಳಾಸ	ಕೇಂದ್ರ ಸ್ಥಾನದ ವಿವರ
1	ಶ್ರೀ ಎ.ಕೆ. ಸೂರಯ್ಯ, ದೈಹಿಕ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭೋವಿ ಕಾಲೋನಿ, ಭದ್ರಾವತಿ ತಾಲ್ಲೂಕು	ತಾಲ್ಲೂಕು ಪಂಚಾಯಿತಿ ಕಛೇರಿ, ಭದ್ರಾವತಿ.
2	ಶ್ರೀ ಮಹಾಬಲೇಶ್ವರ ಹೆಗಡೆ, ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಭಾರತೀಪುರ ತೀರ್ಥಹಳ್ಳಿ ತಾಲ್ಲೂಕು	ತಾಲ್ಲೂಕು ಪಂಚಾಯಿತಿ ಕಛೇರಿ, ತೀರ್ಥಹಳ್ಳಿ.
3	ಶ್ರೀ ಪಿ. ಸೈಯದ್ ಮುನೀರ್ ಸಹ ಶಿಕ್ಷಕರು, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚನ್ನಿಗನ ತೋಟ, ಹೊನ್ನೇವರ ಅಂಚೆ, ಸಾಗರ ತಾಲ್ಲೂಕು	ತಾಲ್ಲೂಕು ಪಂಚಾಯಿತಿ ಕಛೇರಿ, ಸಾಗರ.
4	ಶ್ರೀ ಹಾಲೇಶ ನವುಲೆ, ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರೂರು, ಸೊರಬ ತಾಲ್ಲೂಕು	ತಾಲ್ಲೂಕು ಪಂಚಾಯಿತಿ ಕಛೇರಿ, ಸೊರಬ.
5	ಶ್ರೀ ಎಸ್. ಸುರೇಶ್, ಸಹ ಶಿಕ್ಷಕರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೊಸೂರು, ಶಿಕಾರಿಪುರ ತಾಲ್ಲೂಕು	ತಾಲ್ಲೂಕು ಪಂಚಾಯಿತಿ ಕಛೇರಿ, ಶಿಕಾರಿಪುರ.